ಕ್ಯಾನ್ಸ್ ಹಿಂದೂಗಳ ಅಪ್ಲಿಕೇಷ್ ಆದರೆ 10 ಎಕರೆ, 20 ಎಕರೆ, 50 ಎಕರೆಯವರೆಗೂ ಕೊಡುತ್ತಾಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಸರ್ಕಾರದವರ ಗಮನಕ್ಕೆ ಬಂದಿಲ್ಲ.

ಶ್ರೀ ಟಿ. ಹನುಮಯ್ಯ.—ಈ ತರಹ ಜಮೀನು ಇಲ್ಲದೇ ಇರತಕ್ಕವರಿಗೆ ಕಡಮೆ ಜಮೀನು ಕೊಟ್ಟು, ಜಮೀನಿದ್ದವರಿಗೇ ಹೆಚ್ಚು ಜಮೀನು ಕೊಡುತ್ತಾಯಿರುವುದು ಅನ್ಯಾಯ ಎಂದು ಸರ್ಕಾರದವರು ಒಪ್ಪಿಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಜಮೀನಿಲ್ಲದವರಿಗೇ ಜಮೀನು ಕೊಡಬೇಕೆಂದು ಲ್ಯಾಂಡ್ ರೆವೆನ್ಯೂ ನಿಬಂಧನೆಯನ್ನು ಕೂಡ ಬದಲಾಯಿಸಿದೆ. ಅದಕ್ಕಿಂತ ಹೆಚ್ಚು ಹೇಳುವುದಕ್ಕಾಗುವುದಿಲ್ಲ.

---

## Agitation in respect of land granted to Sri V. Nanjappa

*Q.*—287. **Sri N. C. NAGAIAH REDDY** (Goribidnur).—

Will the Government be pleased to state:—

(*a*) whether there is agitation by the dispossessed raiyats of Mattedoddi village, Ramanagaram Taluk, that the lands granted to Sri V. Nanjappa, brother of the Chief Minister, should be restored to them;

(*b*) the steps they have taken in this behalf?

*A.*—**Sri Kadidal MANJAPPA** (Minister for Revenue and Public Works).—

(*a*) As per Government Order dated the 20th March 1952, Sri V. Nanjappa had been granted 50 acres of land out of Atchalu State Forest. It is reported that no ryot who had any right to be in possession has been dispossessed. Therefore, the question of restoration does not arise.

(*b*) The Government cannot take any step unless the grantee surrenders the land to Government for disposal.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ನಂಜಪ್ಪನವರಿಗೆ ಈ ಜಮೀನು ಗ್ರಾಂಟ್ ಮಾಡಿದ ಕಾಲದಲ್ಲಿ ರೈತರು 50 ಎಕರೆಯನ್ನು ಸಾಗುಮಾಡುತ್ತಾಯಿದ್ದರಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಬಂದಿರುವ ವರದಿ ಪ್ರಕಾರ ಈ 50 ಎಕರೆ ಪೈಕಿ 14 ಎಕರೆಯನ್ನು 1952 ನೇ ಮಾರ್ಚಿ ಆಖೈರಿನವರೆಗೂ ಗೇಣಿ ಕರಾರಿಗನು ಸಾರವಾಗಿ ಸಾಗುವಳಿ ಮಾಡುತ್ತಾಯಿದ್ದರು.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಈ 50 ಎಕರೆ ಜಮೀನೂ ಸಾಗುವಳಿಯಾಗುತ್ತಿತ್ತೆ, ಇಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಹುಭಾಗ ಸಾಗುವಳಿಯಾಗುತ್ತಿತ್ತು. ಕೆಲವರು ಗೇಣಿ ಮೇರೆ ಮಾಡುತ್ತಿದ್ದರು. ಬಾಕಿಯವರು ಎಲ್ಲರೂ ಕೂಡ unauthorised cultivators.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಈ ಜಮೀನನ್ನು ಇವರಿಗೆ ಗ್ರಾಂಟ್ ಮಾಡಿದ ಕಾಲದಲ್ಲಿ ಆದು ರೈತರ ವಶದಲ್ಲಿತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ವಶದಲ್ಲಿತ್ತು. ಆದರೂ ಕೆಲವು ಭಾಗವನ್ನು ಒಂದು ವರ್ಷದ ಗೇಣಿ ಸಾಗುವಳಿ ಕರಾರಿನ ಮೇರೆ ಸಾಗುವಳಿ ಮಾಡುತ್ತಿದ್ದರು. ಇನ್ನು ಕೆಲವು ಭಾಗ unauthorised ಆಗಿ ಸಾಗುವಳಿಯಾಗುತ್ತಿತ್ತು.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಜಮೀನನ್ನು ಗ್ರಾಂಟು ಮಾಡಿದ ಕಾಲದಲ್ಲಿ ಶ್ರೀ ನಂಜಪ್ಪನವರು ಸರ್ಕಾರಿ ನೌಕರಿಯಲ್ಲಿದ್ದರೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಶ್ರೀ ವಿ. ನಂಜಪ್ಪನವರು ಜಮೀನು ಗ್ರಾಂಟಾದ ಕಾಲದಲ್ಲಿ ಸರ್ಕಾರಿ ನೌಕರಿಯಲ್ಲಿದ್ದರೆಂದರೆ ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಿಲ್ಲ; ಆಗಿನ ಕಾಲದಲ್ಲಿದ್ದರೇ ಎಂಬುದನ್ನು ಹೇಳಲಾರೆ.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಆಗ ನಸ್ಪೆಕ್ಷನ್‌ನಲ್ಲಿದ್ದರೇ ಎಂದು ಪ್ರಶ್ನೆ ಕೇಳಿದ್ದಕ್ಕೆ 'ಹೌದು' ಎಂದು ತಿಳಿಸಿದ್ದೀರಲ್ಲಾ ?

**Sri Kadidal MANJAPPA.**—It seems he had tendered resignation.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಆದು accept ಆಗದೆ ಈಗಲೂ ಅವರು ಸರ್ಕಾರಿ ನೌಕರಿಯಲ್ಲಿದಾರೆಂದರೆ ಒಪ್ಪುತ್ತೀರಾ ?

**Sri Kadidal MANJAPPA.**—I want notice, I cannot give a definite reply.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಹೀಗೆ ಸರ್ಕಾರಿ ನೌಕರಿಯಲ್ಲಿರುವವರಿಗೆ ಜಮೀನನ್ನು ಕೊಡುವುದು ಮೈನೂರು ಸರ್ವಿಸ್ ರೆಗ್ಯುಲೇಷನ್ನಿಗೆ ವಿರುದ್ಧವಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಸರ್ಕಾರಿ ನೌಕರಿಯಲ್ಲದ್ದಾರೆಂದು ಒಪ್ಪಿಕೊಂಡಿದ್ದರೆ ತಾನೆ ಆ ಪ್ರಶ್ನೆ ಬರುತ್ತದೆ. ನನಗೆ ತಿಳಿದಿರುವ ಮಟ್ಟಿಗೆ ಅವರು ರಾಜಿನಾಮೆ ಕೊಟ್ಟಿದ್ದರೆಂದು ತಿಳಿದುಬಂದಿದೆ.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಅವರ ಮೇಲೆ ದುಡ್ಡು ತಿಂದರು ಎಂದು ಕೇಸುಹಾಕಿದ್ದು ಯಾಕೆ?

**Mr. SPEAKER.**—That does not arise out of this.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಹೀಗೆ ಒಮ್ಮೆ ಜಮೀನನ್ನು ಗ್ರಾಂಟ್ ಮಾಡಿದ ಮೇಲೆ, ಆ ಜನಗಳಿಂದ ಜಮೀನುಗಳನ್ನು ಪುನಃ ಸರ್ಕಾರದವರು ವಾಪಸು ತೆಗೆದುಕೊಂಡು ಅದನ್ನು ಪುನಃ dispose ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೈಕೋರ್ಟಿನ ತೀರ್ಮಾನ ಇತ್ತೀಚೆಗೆ ಒಂದು ಆಗಿದೆ. ಅದಕ್ಕಿಂತ ಹಿಂದೆಯೂ ಕೆಲವು ಸಂದರ್ಭಗಳಲ್ಲಿ ಒಮ್ಮೆ ಗ್ರಾಂಟ್' ಮಾಡಿದ ಜಮೀನನ್ನು ವಾಪಸು ತೆಗೆದುಕೊಂಡಿರುವುದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ತಾವೇ ಹಿಂದೊಮ್ಮೆ ಲಂಚ ನಿರೋಧ ಇಲಾಖೆಯಿಂದ ಇವರ ವಿಷಯದಲ್ಲಿ ಒಂದು ತನಿಖೆ ಆಗುತ್ತಿದೆಯೆಂದು ಹೇಳಿರಲಿಲ್ಲವೇ?

**Mr. SPEAKER.**—It does not arise out of this.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅಲ್ಲಿನ ರೈತರುಗಳು ಎಷ್ಟು ವರ್ಷಗಳಿಂದ ಆ ಜಮೀನನ್ನು ಸಾಗುವಳಿ ಮಾಡುತ್ತಿದ್ದರು ?

Sri Kadidal MANJAPPA.—It is better to make a brief statement about this land to avoid further discussion. This Echalu State Forest consists of 641 and odd acres. Out of 641 acres, about 85 acres were under *tangya* rules.....

Sri N. C. NAGAIAH REDDY.—While allowing him to make a statement I may be allowed to meet those points.

Mr. SPEAKER.—Sri Puttaswamy, you may put supplementary questions.

ಶ್ರೀ ಕೆ. ಪುಟ್ಟಸ್ವಾಮಿ.—ಈ 50 ಎಕರೆಗಳ ಪೈಕಿ ಎಷ್ಟು authorised cultivation ನಲ್ಲಿತ್ತು, ಎಷ್ಟು unauthorised cultivation ನಲ್ಲಿತ್ತು ?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು 14 ಎಕರೆಗಳಷ್ಟು ಭಾಗ ಮಾತ್ರ authorised cultivation ನಲ್ಲಿತ್ತು. ಅಂದರೆ, 1951ನೆಯ ಇಸವಿಯಿಂದ ಒಂದು ವರ್ಷದ ಅವಧಿಯ ಒಂದು ಗೇಣಿ ಕರಾರಿಗೊಳಪಟ್ಟು ವ್ಯವಸಾಯ ಮಾಡುತ್ತಿದ್ದರು.

ಶ್ರೀ ಕೆ. ಪುಟ್ಟಸ್ವಾಮಿ.—ಎಷ್ಟು ಜನರು ಈ ರೀತಿಯಾಗಿ ಗೇಣಿ ಕರಾರನ್ನು ಬರೆಸಿಕೊಂಡು ವ್ಯವಸಾಯ ಮಾಡುತ್ತಿದ್ದರು ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ನಿರ್ದಿಷ್ಟವಾಗಿ ಹೇಳಲಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಎಷ್ಟು ಜನರು unauthorised ಆಗಿ ಸಾಗುವಳಿ ಮಾಡುತ್ತಿದ್ದರು ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೂ ನೋಟೀಸ್ ಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಹೀಗೆ ನೀವು ಸ್ವಾಧೀನದಲ್ಲಿದ್ದವರಿಂದ—ಅವರು authorised ಆಗಿ ಸಾಗು ಮಾಡುತ್ತಿದ್ದರೆಂದಾಗಲಿ, ಅಥವಾ unauthorised ಆಗಿ ಸಾಗು ಮಾಡುತ್ತಿದ್ದರೆಂದಾಗಲಿ—ಜಮೀನು ಕಿತ್ತುಕೊಂಡು ಸ್ವಾಧೀನ ತಪ್ಪಿಸಿದಮೇಲೆ, ಜಮೀನಿಲ್ಲದಿರುವವರಿಗೆ ಜಮೀನನ್ನು ಕೊಡಬೇಕೆಂದಿರುವ ಸರ್ಕಾರದ ನೀತಿಯನ್ನು ಪರಿಪಾಲಿಸುವುದಕ್ಕಾಗಿ ಏನು ಕಾರ್ಯಕ್ರಮವನ್ನು ಕೈಕೊಂಡಿರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೆ ಜಮೀನು ಬೇಕೆಂದರೆ ಬೇರೆ ಜಮೀನುಗಳಿವೆ. ಆದರೆ ಆ ಜಮೀನುಗಳನ್ನು ಅವರು ತೆಗೆದುಕೊಳ್ಳುವಂತೆ ಕಾಣುವುದಿಲ್ಲ. ಈಗಲೂ ಅವರು ಒಪ್ಪಿದರೆ ಅವರಿಗೆ ಕೊಡುವುದಕ್ಕೆ ಬೇಕಾದಷ್ಟು ಜಮೀನಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಜಮೀನಿಲ್ಲದವರಿಗೆ ಜಮೀನು ಕೊಡಬೇಕೆಂಬ ನೀತಿಯ ಬಗ್ಗೆ ಜಮೀನು ಕೊಡುವುದಕ್ಕೆ ಈ 50 ಎಕರೆಗಳನ್ನು ಕೊಡುವುದರಲ್ಲಿ ಪ್ರಯತ್ನಪಟ್ಟಿರಾ ?

ಶ್ರೀ ಕಡಿದಾಳ್ ಮಂಜಪ್ಪ.—1952ನೆಯ ಇಸವಿಯಲ್ಲೇ ಆ ಜಮೀನನ್ನು ಕೊಟ್ಟಿದೆಯೆಂದು ಹೇಳಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಇರಬಹುದು ; ಆದರೆ ಸರ್ಕಾರದ ನೀತಿಯನ್ನು ಈ ವಿಷಯದಲ್ಲಿ ಪರಿಪಾಲಿಸಿದಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ಒಂದುಸಾರಿ ಜಮೀನು ಕೊಟ್ಟಮೇಲೆ ಅದನ್ನು ತಪ್ಪಿಸುವುದು ಹೇಗೆ?

ಶ್ರೀ ಕೆ. ಪುಟ್ಟಸ್ವಾಮಿ.—ಕೊಟ್ಟಾಗ ಹಾಗೆ ಮಾಡಿದಿರಾ ?

ಶ್ರೀ ಕಡಿದಾಳ್ ಮಂಜಪ್ಪ.—1951ನೆಯ ಇಸವಿಯಲ್ಲಿದ್ದ ರೂಲ್ಸ್ ಪ್ರಕಾರವೇ ಇದನ್ನು ಕೊಟ್ಟಿದೆ. ಆ ರೂಲ್ಸ್ ಬದಲಾವಣೆ ಆದದ್ದು ಇತ್ತೀಚೆಗೆ.

ಶ್ರೀ ಕೆ. ಪುಟ್ಟಸ್ವಾಮಿ.—ಈ ರೀತಿಯಾಗಿ ಅಲ್ಲಿ ಎಷ್ಟುಜನ ಜಮೀನು ಕಳೆದುಕೊಂಡು ನಿರ್ಗತಿಕರಾಗಿದ್ದಾರೆಂಬುದನ್ನು ತಿಳಿದುಕೊಳ್ಳುವುದಕ್ಕಾದರೂ ತಾವು ಪ್ರಯತ್ನಪಟ್ಟಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಯಾರಿಂದಲೂ ಜಮೀನನ್ನು ಕಿತ್ತುಕೊಂಡಿಲ್ಲ. ಅಲ್ಲಿದ್ದವರಿಗೆ ಯಾರಿಗೂ ಆ ಜಮೀನಿನ ಮೇಲೆ ಹಕ್ಕಿರಲಿಲ್ಲ. ಟಾಂಗ್ಯ ರೂಲ್ಸ್ ಪ್ರಕಾರ 1952ನೆಯ ಇಸವಿ ಮಾರ್ಚಿಯ ಆಖೈರ್ ವರೆಗೆ ಕೆಲವರಿಗೆ ಜಮೀನುಗಳನ್ನು ಕೊಟ್ಟಿದ್ದರು. ಉಳಿದವರಿಗೆ ಆ ಜಮೀನುಗಳ ಮೇಲೆ ಯಾವ ಹಕ್ಕೂ ಇರಲಿಲ್ಲ. ಆದ್ದರಿಂದ ಅವರು ಸ್ವಾಧೀನದಲ್ಲಿದ್ದರೆಂಬ ಪ್ರಶ್ನೆಯೇ ಬರುವುದಿಲ್ಲ. ಅಂದಮೇಲೆ ಹಕ್ಕಿನ ಪ್ರಶ್ನೆಯೇ ಇಲ್ಲಿಲ್ಲ.

Sri K. PUTTASWAMY.—Nothing prevented the Government from continuing the lease. When the lease is terminated, have the Government made any enquiries to know what has happened to those poor fellows ?

Sri Kadidal MANJAPPA.—We have tried to give them lands in the same area elsewhere, but they have not agreed to come forward to take them.

ಶ್ರೀ ಕೆ. ಪುಟ್ಟಸ್ವಾಮಿ.—'We have tried' ಎಂದರೆ, ಏನೇನು ಮಾಡಿದಿರಿ ?

Sri Kadidal MANJAPPA.—We have offered them lands through our Revenue officers.

Sri K. PUTTASWAMY.—Whether it is authorised cultivation or unauthorised cultivation, since how long was it going on in this forest ?

Sri Kadidal MANJAPPA.—Since 1941 in some cases and since 1945 in some cases, according to the reports I have received.

Sri K. PUTTASWAMY.—When the Government granted this land, did the Government take into consideration the labour that had been contributed by those persons who were in possession, in bringing the land under cultivation?

Sri Kadidal MANJAPPA.—They have taken into consideration all aspects ; they have taken into consideration the labour ; they have taken into consideration the income they have derived out of this land.

Sri K. PUTTASWAMY.—What type of land is this ?

Sri Kadidal MANJAPPA.—I think it is dry land.

Sri K. PUTTASWAMY.—What is the amount of money or labour that these persons had spent on the land ?

Sri Kadidal MANJAPPA.—There is no question of compensation. The question of paying compensation does not arise at all. They had no right at all.

Sri H. C. LINGA REDDY.—You were pleased to state that some tenants were in possesion of some of the lands and they have been given lands for only one year. Did they give up posssession of the land after one year of their own accord ?

Mr. SPEAKER.—That question was answered. Sufficient number of supplementary questions have been put.

---

## Land granted from Laggere gomals—Bangalore North Taluk.

*Q.*—288. Sri R. MUNISWAMIAH (Bangalore North-Scheduled Castes).—

Will the Government be pleased to state :—

(*a*) the names of persons and their addresses, to whom the lands were granted in the Laggere gomals in Bangalore North Taluk since 1st April 1948 ;

(*b*) the names of Harijan applicants that applied for lands in that gomal since 1st April 1948 ;

(*c*) the names of Harijan applicants that were granted lands from this gomal since 1st April 1948 ;

(*d*) the reason why the applications of the Depressed Class people who were living in the same and neighbouring villages, though they have been praying for grant of lands since 1st April 1948, were not considered ?

*A.*—Sri Kadidal MANJAPPA (Minister for Revenue and Public Works).—

(*a*)—

Sriyuts—

| | | |
|---|---|---|
| 1 | Sm. Bhavani Bayamma ... | Kethamaranahalli |
| 2 | Muninarasappa ... | Do |
| 3 | Thimmaiah ... | Do |
| 4 | Munibyrappa ... | Bangalore City |
| 5 | D. H. Hanumaiah ... | Do |
| 6 | Sm. Leelavathamma ... | Do |

Sriyuts—

| | | |
|---|---|---|
| 7 | Sm. Channamma ... | Bangalore City |
| 8 | Sm. Vasantha Lakshmamma ... | Do |
| 9 | Chikkanarasa | Laggere Village, Yeswanthapura Hobli, Bangalore North Taluk. |
| 10 | Muniyappa | |
| 11 | Byappa | |
| 12 | Thoti Muniya | |
| 13 | Hutchanna | |
| 14 | Putta Hucha | |
| 15 | Narayanai | |
| 16 | Doddareva | |
| 17 | Mylarappa | |
| 18 | Maraiah | |
| 19 | Reviah | |
| 20 | Venkatahanuma | |
| 21 | Muninarasa | |
| 22 | Sakappa | |
| 23 | Sm. Munemma | |

(*b*) Serial Nos. 9 to 23 (both inclusive) in reply to (*a*) above and the following 14 :—

Sriyuts—

| | | |
|---|---|---|
| 1 | Munirangappa | They are living in Laggere and other dakala villages such as Kurubarahalli. |
| 2 | Sannappa | |
| 3 | Maddurappa | |
| 4 | Gangi *alias* Muniyappa | |
| 5 | Venkatappa | |
| 6 | Narasimhiah | |
| 7 | Maribalappa | |
| 8 | Narasappa | |
| 9 | Hanumappa | |
| 10 | Anjanappa | |
| 11 | Hanumanthappa | |
| 12 | Nagappa | |
| 13 | Kemparaj | |
| 14 | Chaluviah | |

Total 29 names.

(*c*) Sl. Nos. 9 to 23 in the answer to (*a*) of this question.

(*d*) Gomal is insufficient.

ಶ್ರೀ ಆರ್. ಮುನಿಸ್ವಾಮಯ್ಯ.—(*a*) ಭಾಗದ ಉತ್ತರದಲ್ಲಿ ಕೊಟ್ಟಿರತಕ್ಕ ಮೊದಲನೆಯ ೪ ಮಂದಿಗೆ ಬೇರೆ ಕಡೆಯಲ್ಲಿ ಭೂಮಿಗಳಿಲ್ಲವೆ ?

Sri Kadidal MANJAPPA.—I want notice.

ಶ್ರೀ ಆರ್. ಮುನಿಸ್ವಾಮಯ್ಯ.—ಅವರುಗಳು ಅರ್ಜಿ ಕೊಡುವುದಕ್ಕೆ ಮೊದಲು ಹರಿಜನ ಅರ್ಜಿದಾರರುಗಳು ಅರ್ಜಿಗಳನ್ನು ಕೊಟ್ಟಿರಲಿಲ್ಲವೆ ?